**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.2416/2022.**

| | |
|---|---|
| ಪಿರ್ಯಾದುದಾರರುಃ- | ನಾಗರಾಜ ಅಣ್ಣಪ್ಪ ನಾಯ್ಕ,<br>ವಯಸ್ಸು ಸುಮಾರು 33 ವರ್ಷ,<br>ಸಾಕೀನಃ ಹನುಮಾಪುರ, ಗುಂಡಬಾಳ,<br>ಪೊಸ್ಟಃ ಮುಟ್ಟಾ,<br>ತಾಲೂಕುಃ ಹೊನ್ನಾವರ (ಉ.ಕ) |

**-ವಿರುದ್ಧ-**

| | |
|---|---|
| ಆರೋಪಿಯ ಹೆಸರುಃ- | ಮೆಲ್ವಿನ್ ಜಾನವ್ ತಿಸೇರಾ,<br>ವಯಸ್ಸು ಸುಮಾರು 31 ವರ್ಷ,<br>ಸಾಕೀನಃ ಗುಂಡಬಾಳ,<br>ಪೋಸ್ಟಃ ಮುಟ್ಟಾ,<br>ತಾಲೂಕುಃ ಹೊನ್ನಾವರ (ಉ.ಕ). |

## ಆಪಾದನೆ

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿ ಹಾಗೂ ಪಿರ್ಯಾದಿದಾರನು ತುಂಬಾ ಪರಿಚಯಸ್ಥರಾಗಿದ್ದು, ಆರೋಪಿಯು ಪಿರ್ಯಾದಿದಾರನಿಂದ ಮನೆ ರಿಪೇರಿ ಮತ್ತು ವಾಹನ ಖರೀದಿಗಾಗಿ ರೂ.7,00,000/- ಗಳ ಸಾಲವನ್ನು ಪಡೆದುಕೊಂಡಿದ್ದು ಇರುತ್ತದೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕರ್ನಾಟಕ ಬ್ಯಾಂಕ್ ಲಿ., ಹೊನ್ನಾವರ** ಶಾಖೆಯ ಚೆಕ್ ನಂ.814393 ನ್ನು ದಿನಾಂಕ 27-10-2021 ರಂದು ರೂ.7,00,000/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಬ್ಯಾಂಕ್., ಕವಲಕ್ಕಿ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds insufficient' ಎಂದು

ತಿಳಿಸಿ ಸದರಿ ಚೆಕನ್ನು ದಿನಾಂಕ 29-10-2021 ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 07-11-2021 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್‌ನ್ನು ಆರೋಪಿಯು ಸ್ವೀಕರಿಸದೇ ಇನ್ಕಾರ್ ಮಾಡಿದ್ದು, ದಿನಾಂಕಃ 26-11-2021 ರಂದು ಪಿರ್ಯಾದಿದಾರನ ವಕೀಲರಿಗೆ ವಾಪಸ್ಸ್ ಬಂದಿರುತ್ತದೆ. ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ- 09-06-2025.**

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಯವರ ನ್ಯಾಯಾಲಯ., ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ

****